೧

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 830 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 12-12-2023. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜವಳಿ ನೀತಿ ಜಾರಿಯಲ್ಲಿದೆಯೇ; ಹಾಗಿದ್ದಲ್ಲಿ ಜವಳಿ ನೀತಿಯ ಬಗ್ಗೆ ಸಂಕ್ಷಿಪ್ತವಾದ ವಿವರ ನೀಡುವುದು; | ಹೌದು,<br>ಜವಳಿ ನೀತಿಯ ಬಗ್ಗೆ ಸಂಕ್ಷಿಪ್ತವಾದ ವಿವರ ಈ ಕೆಳಕಂಡಂತಿರುತ್ತದೆ.<br>ದಿನಾಂಕ:04.11.2019 ರಂದು ಜವಳಿ/ ಸಿದ್ಧ ಉಡುಪು ಉದ್ಯಮದ ಅಭಿವೃದ್ಧಿಗೆ ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ 2019-24 ಅನ್ನು ಘೋಷಿಸಲಾಗಿರುತ್ತದೆ. ಕೋವಿಡ್-19 ಹಾಗೂ ಜಾಗತಿಕ ಆರ್ಥಿಕ ಹಿಂಜರಿತ ಹಿನ್ನೆಲೆಯಲ್ಲಿ ಜವಳಿ ನೀತಿಯನ್ನು ಇನ್ನಷ್ಟು ಉದ್ಯಮಿ ಸ್ನೇಹಿಯನ್ನಾಗಿಸಲು ದಿನಾಂಕ:02.08.2022 ರಂದು ಜವಳಿ ನೀತಿಯನ್ನು ಪರಿಷ್ಕರಣೆ ಮಾಡಲಾಗಿರುತ್ತದೆ.<br>• ನೀತಿಯ ಉದ್ದೇಶ: ಜವಳಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವುದು. ಈ ಅವಧಿಯಲ್ಲಿ 10,000 ಕೋಟಿ ಬಂಡವಾಳ ಆಕರ್ಷಣೆ ಹಾಗೂ 5 ಲಕ್ಷ ಹೊಸ ಉದ್ಯೋಗಗಳನ್ನು ಸೃಜಿಸುವುದು.<br>• ಈ ನೀತಿಯಡಿಯಲ್ಲಿ ನೇಯ್ಗೆ, ಸ್ಪಿನ್ನಿಂಗ್, ಸಂಯೋಜಿತ ಘಟಕ, ಸಂಸ್ಕರಣ ಘಟಕ ಮತ್ತು ತಾಂತ್ರಿಕ ಜವಳಿ ಘಟಕಗಳನ್ನು ಆದ್ಯತಾ ವಲಯ ಎಂದು ಗುರುತಿಸಿ, ಹೆಚ್ಚುವರಿ ಸಹಾಯಧನ ನೀಡಲಾಗುವುದು.<br>• ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ (ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ) ಹೆಚ್ಚಿನ ರಿಯಾಯಿತಿ ಹಾಗೂ ಪ್ರೋತ್ಸಾಹನಗಳನ್ನು ಘೋಷಿಸಲಾಗಿದೆ.<br>• ಸಿದ್ಧ ಉಡುಪು ವಲಯಕ್ಕೆ ಪ್ರತ್ಯೇಕ ರಿಯಾಯಿತಿ ಪ್ರೋತ್ಸಾಹನಗಳನ್ನು ಘೋಷಿಸಲಾಗಿದೆ.<br>• ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ/ ಮಹಿಳೆ/ ಮಾಜಿ ಸೈನಿಕರು, ಅಂಗವಿಕಲರು ಹಾಗೂ ಅಲ್ಪಸಂಖ್ಯಾತರಿಗೆ ಹೆಚ್ಚುವರಿ ಶೇ.5 ರಷ್ಟು ಬಂಡವಾಳ ಹೂಡಿಕೆ ಮೇಲೆ ಸಹಾಯಧನ ನೀಡಲಾಗುವುದು.<br>• ತಾಲ್ಲೂಕಿನಲ್ಲಿ ಜವಳಿ ಕೈಗಾರಿಕಾ ಘಟಕ ಸ್ಥಾಪಿಸಲ್ಪಡುವ ಮೊದಲೆರಡು ಘಟಕಗಳಿಗೆ ಹೆಚ್ಚುವರಿ ಶೇ.5 ರಷ್ಟು ಬಂಡವಾಳ ಹೂಡಿಕೆ ಮೇಲೆ ಸಹಾಯಧನ ನೀಡಲಾಗುವುದು. |

| | | |
|---|---|---|
| (ಆ) | ಸರ್ಕಾರವು ಜವಳಿ ನೀತಿ ಯೋಜನೆಯಡಿಯಲ್ಲಿ ಅನುಷ್ಠಾನ ಗೊಳಿಸಲಾದ ಯೋಜನೆ ಗಳಾವುವು?(ವಿವರ ನೀಡುವುದು) | ಸರ್ಕಾರವು ಜವಳಿ ನೀತಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾದ ಯೋಜನೆಗಳು ಹಾಗೂ ವಿವರ ಈ ಕೆಳಕಂಡಂತಿರುತ್ತದೆ.<br>• ಸಾಲಾಧಾರಿತ ಬಂಡವಾಳ ಸಹಾಯಧನ (10% ರಿಂದ 30% ಸಹಾಯಧನ ಒಟ್ಟು ಬಂಡವಾಳ ಹೂಡಿಕೆಯ ಮೇಲೆ).<br>• ಬಡ್ಡಿ ಸಹಾಯಧನ (ಮಧ್ಯಮ ಹಾಗೂ ಲಾರ್ಜ್ ಜವಳಿ/ಸಿದ್ಧ ಉಡುಪು ಘಟಕಗಳಿಗೆ ಮೊದಲ 05 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ವಾರ್ಷಿಕ ಶೇ.5 ರಷ್ಟು ಬಡ್ಡಿ ಸಹಾಯಧನ).<br>• ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನ (ಪ್ರತಿ ಯುನಿಟ್‌ಗೆ ರೂ.1/- ರಿಂದ ರೂ.2/- ರಂತೆ ವಿದ್ಯುತ್ ವೆಚ್ಚದ ಮರುಪಾವತಿ).<br>• ಇ.ಎಸ್.ಐ & ಇ.ಪಿ.ಎಫ್ ಮರುಪಾವತಿ ಸಹಾಯಧನ (ಶೇ.75 ರಷ್ಟು ಮಾಲೀಕರ ವಂತಿಕೆ ಮರುಪಾವತಿ).<br>• ವೇತನ ಸಹಾಯಧನ (ಸಿದ್ಧ ಉಡುಪು ಘಟಕಗಳಿಗೆ ಪ್ರತಿ ಕಾರ್ಮಿಕರಿಗೆ ರೂ.2,000/- ರಿಂದ ರೂ.3,000/- ವೇತನ ಸಹಾಯಧನ.<br>• ಶೇ.100 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ & ಪ್ರತಿ ರೂ.1,000/-ಕ್ಕೆ ರೂ.1/- ರ ದರದಲ್ಲಿ ನೋಂದಣಿ ಶುಲ್ಕ ರಿಯಾಯಿತಿ.<br>• ತ್ಯಾಜ್ಯ ವಿಲೇವಾರಿ ಘಟಕ-ETP (ಶೇ.50 ರಷ್ಟು ಬಂಡವಾಳ ಸಹಾಯಧನ ಅಥವಾ ರೂ.5.00 ಕೋಟಿ ಯಾವುದು ಕಡಿಮೆಯೋ ಅದು).<br>• ಗ್ರೀನ್ ಫೀಲ್ಡ್ ಟೆಕ್ಸ್ ಟೈಲ್ ಪಾರ್ಕ್ (ವೈಯಕ್ತಿಕ/ ಎಸ್.ಪಿ.ವಿ. ರವರು ಕನಿಷ್ಠ 15 ಎಕರೆ ವಿಸ್ತೀರ್ಣ ಹೊಂದಿದ್ದು, ಪಾರ್ಕ್ ಸ್ಥಾಪನೆಗೆ ಸಾಮಾನ್ಯ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಯೋಜನಾ ವೆಚ್ಚದ ಮೇಲೆ 40% ಅಥವಾ ರೂ.40.00 ಕೋಟಿವರೆಗೆ ಸಹಾಯಧನ ಒದಗಿಸಲಾಗುವುದು).<br>• ತರಬೇತಿ ಕಾರ್ಯಕ್ರಮ (45 ದಿನಗಳ ಎಸ್.ಎಮ್.ಒ/ ಕೈಮಗ್ಗ/ ವಿದ್ಯುತ್ ಮಗ್ಗ ತರಬೇತಿಗಾಗಿ ಪ್ರತಿ ಫಲಾನುಭವಿಗೆ ರೂ.3,500/- ಸ್ಟೈಫಂಡ್ ಆಗಿ, ಕಚ್ಚಾ ಸಾಮಗ್ರಿಗಳಿಗೆ ರೂ.1,000/- ಗಳು ಮತ್ತು ಎಸ್.ಡಿ.ಸಿ ತರಬೇತಿ ಕೇಂದ್ರಕ್ಕೆ ರೂ.5,000/- ಮತ್ತು ಖಾಸಗಿ ತರಬೇತಿ ಕೇಂದ್ರಕ್ಕೆ ರೂ.6,500/- ಸಂಸ್ಥೆಯ ಶುಲ್ಕ). |

ಸಂಖ್ಯೆ: CI 146 JAKE 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು